ಎಲ್.ಎ.ಸಿ ನಂಃ 361/2018
ಪಿ.ಡಬ್ಲೂ ನಂಃ 01

<u>ಇಂದು ದಿನಾಂಕಃ 13.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ **ಸವಾಲುಃ 1ನೇ ಪ್ರತಿವಾದಿ ಪರ ಮಾನ್ಯ ಡಿ.ಜಿ.ಪಿ ರವರಿಂದಃ**</u>

1. ಮಂಗಸೂಳಿ ಇದು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಮಂಗಸೂಳಿ ಮತ್ತು ಐನಾಪುರ ಇವು 10 ಕಿಮೀ ದೂರದಲ್ಲಿರುತ್ತವೆ ಎಂದರೆ ಸರಿಯಲ್ಲ. ಮಂಗಸೂಳಿ ಮತ್ತು ಮೊಳೆ ಗ್ರಾಮಗಳು 16 ಕಿಮೀ ದೂರದಲ್ಲಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 3-4 ಕಿಮೀ ದೂರದಲ್ಲಿರುತ್ತವೆ ಎಂದು ಹೇಳುತ್ತಾರೆ. ಹಳ್ಳಿಗಳ ನಡುವಿನ ಅಂತರ ತೋರಿಸಲು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಮಂಗಸೂಳಿ ಗ್ರಾಮದ ಬೇರೆ ಬೇರೆ ಭಾಗದಲ್ಲಿ ಬೇರೆ ಬೇರೆ ಫಲವತ್ತತೆಯ ಜಮೀನುಗಳು ಇರುತ್ತವೆ ಎಂದರೆ ಸರಿ. ಜಮೀನುಗಳ ಫಲವತ್ತತೆಯ ಆಧಾರದ ಮೇಲೆ ಬೇರೆ ಬೇಲೆ ಬೆಲೆ ಹೆಚ್ಚು ಕಡಿಮೆ ಇರುತ್ತದೆ ಎಂದರೆ ಸರಿ. ಐನಾಪುರ ಮೊಳೆ ಗ್ರಾಮಗಳು ಮಂಗಸೂಳಿ ಗ್ರಾಮಕ್ಕಿಂತ ದೊಡ್ಡ ಗ್ರಾಮಗಳು ಎಂದರೆ ಸರಿ. ಸದರಿ ಗ್ರಾಮದ ಜಮೀನುಗಳ ಬೆಲೆ ಹೆಚ್ಚಿ ಗೆ ಇರುತ್ತದೆ ಎಂದರೆ ಸರಿ.

2. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಉತಾರೆಗಳು 2017-18ನೇ ವರ್ಷಕ್ಕೆ ಸಂಬಂಧಿಸಿದವುಗಳು ಎಂದರೆ ಸರಿ. ಜಮೀನುಗಳನ್ನು ಸ್ವಾಧೀನಪಡಿಸಿಕೊಂಡ ವರ್ಷಕ್ಕೆ ಸಂಬಂಧಿಸಿದ ಉತಾರೆಗಳು ಲಭ್ಯವಿರುತ್ತವೆ ಎಂದರೆ ಸರಿ. ಜಮೀನುಗಳಲ್ಲಿ ಬೆಳೆದ ಬೆಳೆಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ಸ್ವಾಧೀನಪಡಿಸಿಕೊಂಡ ವರ್ಷಕ್ಕೆ ಸಂಬಂಧಿಸಿದಂತೆ ಉತಾರೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಉದ್ದೇಶಪೂರ್ವಕವಾಗಿ ಸದರಿ ವರ್ಷಗಳ ಉತಾರೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

3. ನಿಪಿ-2 ರಿಂದ 4 ಕಬ್ಬಿನ ತೂಕದ ಪಾವತಿ ಇವುಗಳು ಸ್ವಾಧೀನಪಡಿಸಿಕೊಂಡ ನಂತರದ ವರ್ಷಕ್ಕೆ ಸಂಬಂಧಿಸಿದವುಗಳು ಎಂದರೆ ಸರಿ. ನಿಪಿ-7 ಮತ್ತು 8 ದರಪಟ್ಟಿಯು ಸ್ವಾಧೀನಗೊಂಡ ಜಮೀನಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ಸ್ವಾಧೀನಪಡಿಸಿಕೊಂಡ ಜಮೀನನ್ನು ಹೊರತುಪಡಿಸಿ ನನಗೆ ಬೇರೆ ಜಮೀನುಗಳು ಇರುತ್ತವೆ ಎಂದರೆ ಸರಿ. ಸ್ವಾಧೀನಪಡಿಸಿಕೊಂಡ ಸಮಯದಲ್ಲಿ ಸದರಿ ಜಮೀನುಗಳು ಒಣಬೇಸಾಯದ ಜಮೀನುಗಳು ಇದ್ದವು ಎಂದರೆ ಸರಿಯಲ್ಲ. ಉಳಿದ ಜಮೀನುಗಳು ನೀರಾವರಿ ಜಮೀನುಗಳಿರುತ್ತವೆ ಎಂದರೆ ಸರಿ.

4. ಮಂಗಸೂಳಿ ಗ್ರಾಮದಲ್ಲಿ ಸಾಲ ಪಡೆಯುವ ಸಂದರ್ಭದಲ್ಲಿ ಜಮೀನನ್ನು ಅಡಾ ಇಡುವ ಪದ್ಧತಿ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-5, 6, 16 ರಿಂದ 18 ಖರೀದಿ ಕರಾರು ಪತ್ರಗಳು ಬಡ್ಡಿಸಾಲ ವ್ಯವಹಾರ ಸಲುವಾಗಿ ಮಾಡಿಕೊಂಡವು ಇರುತ್ತದೆ ಎಂದರೆ ಸರಿಯಲ್ಲ. ನಿಪಿ-5, 6, 16 ರಿಂದ 18 ಖರೀದಿ ಕರಾರು ಪತ್ರಗಳು ನಂತರ ಖರೀದಿ ಪತ್ರಗಳಾಗಿರುವ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ಸದರಿ ಖರೀದಿ ಕರಾರು ಪತ್ರಗಳು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿರುವುದರಿಂದ ಇಲ್ಲಿಯವರೆಗೂ ಅವು ಖರೀದಿ ಪತ್ರಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳನ್ನು ಆಧರಿಸಿ ಸ್ವಾಧೀನಗೊಂಡ ಜಮೀನಿಗೆ ಪರಿಹಾರ ನೀಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

5. ಗುಂಟಾ ಲೆಕ್ಕದಲ್ಲಿ ಜಮೀನುಗಳನ್ನು ಮನೆ ಕಟ್ಟಲು, ಅಂಗಡಿಗಳನ್ನು ಕಟ್ಟಲು ಖರೀದಿಸುತ್ತಾರೆ ಎಂದರೆ ಸರಿ. ನಿಪಿ-5, 6, 11 ರಿಂದ 18 ಖರೀದಿ ಪತ್ರಗಳ ಜಮೀನುಗಳು ವ್ಯಾಪಾರ ಉದ್ದೇಶಕ್ಕೆ ಖರೀದಿಸಿದ ಖರೀದಿ ಪತ್ರಗಳು ಇರುತ್ತವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಖರೀದಿ ಪತ್ರಕ್ಕೆ ಸಂಬಂಧಿಸಿದ ಜಮೀನುಗಳು ಊರಿಗೆ ಹೊಂದಿಕೊಂಡಂತೆ ಮತ್ತು ನೀರಾವರಿ ಜಮೀನುಗಳು ಇರುತ್ತವೆ ಎಂದರೆ ಸರಿ. ನಿಪಿ-5, 6, 11 ರಿಂದ 18 ಇವು ಸ್ವಾಧೀನಪಡಿಸಿಕೊಳ್ಳಲು ಹೊರಡಿಸಿದ ಅಧಿಸೂಚನೆಯ ನಂತರದ ಖರೀದಿ ಪತ್ರಗಳು ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರದ ಜಮೀನುಗಳು, ಖರೀದಿ ಪತ್ರದ ಜಮೀನುಗಳು ಮತ್ತು ನಮ್ಮ ಜಮೀನು ಒಂದೇ ಗುಣಮಟ್ಟದ ಜಮೀನುಗಳು ಎಂದು ತೋರಿಸಲು ತಜ್ಞರಿಂದ ಮಣ್ಣು ಪರೀಕ್ಷಿಸಿ ಯಾವುದೇ ವರದಿ ಸಲ್ಲಿಸಿರುವುದಿಲ್ಲ. ಸದರಿ ಜಮೀನುಗಳು ನನ್ನ ಸ್ವಾಧೀನಗೊಂಡ ಜಮೀನಿಗೆ ಪಕ್ಕದ ಜಮೀನುಗಳು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಖರೀದಿ ಕರಾರು ಪತ್ರಗಳ ಜಮೀನುಗಳು, ಖರೀದಿ ಪತ್ರಗಳ ಜಮೀನುಗಳು ನಮ್ಮ ಜಮೀನಿಗಿಂತ ಉತ್ತಮ ಫಲವತ್ತತೆ ಹೊಂದಿದ ಜಮೀನುಗಳು ಇರುವುದರಿಂದ ಅವುಗಳ ಬೆಲೆ ಹೆಚ್ಚಿಗೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-9 ಮತ್ತು 19 ಆದೇಶಗಳು ಸ್ವಾಧೀನಗೊಂಡ ಜಮೀನಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ.

6. ನನ್ನ ಜಮೀನನ್ನು ಸ್ವಾಧೀನಪಡಿಸಿಕೊಂಡ ಅಧಿಸೂಚನೆಯ ನಂತರ ನನಗೆ ನೋಟಿಸ ಜಾರಿ ಮಾಡಿದ್ದರು ಎಂದರೆ ಸರಿ. ನಂತರ ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ಜಮೀನನ್ನು ಪರಿಶೀಲಿಸಿ ಸೂಕ್ತ ಬೆಲೆಯನ್ನು ನಿಗದಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸ್ವಾಧೀನಪಡಿಸಿಕೊಳ್ಳುವ 3 ವರ್ಷಗಳ ಹಿಂದಿನ ಖರೀದಿ ದಾಖಲೆಗಳನ್ನು ಪರಿಶೀಲಿಸಿ ಸೂಕ್ತ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಅಧಿಕಾರಿಗಳು ನಮ್ಮ ಜಮೀನಿಗೆ ಬಂದು ಜಮೀನಿನ ಮಣ್ಣು ಪರೀಕ್ಷಿಸಿ ಸೂಕ್ತ ಪರಿಹಾರ ನಿಗದಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯವರು ನನ್ನ ಜಮೀನಿಗೆ ಸೂಕ್ತ ಪರಿಹಾರ ನಿಗದಿ ಮಾಡಿದ್ದರೂ, ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಸರಿಯಲ್ಲ.

<u>ಪಾಟೀ **ಸವಾಲುಃ 2ನೇ ಪ್ರತಿವಾದಿ ಪರ ಶ್ರೀ ಎಸ್ ಬಿ ಪಿ ವಕೀಲರಿಂದಃ**</u>

7. ಜಮೀನನ್ನು ಸ್ವಾಧೀನಪಡಿಸಿಕೊಂಡ ನಂತರ ನನಗೆ 1ನೇ ಪ್ರತಿವಾದಿಯವರು ನೋಟಿಸ ಜಾರಿ ಮಾಡಿದ್ದರು ಎಂದರೆ ಸರಿ. ನಾನು ಹೆಚ್ಚಿನ ಪರಿಹಾರಕ್ಕಾಗಿ ಅರ್ಜಿಯನ್ನು ನಿಗದಿತ ಸಮಯದಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿಯನ್ನು 1ನೇ ಪ್ರತಿವಾದಿಯವರು ನ್ಯಾಯಾಲಯಕ್ಕೆ ಕಳುಹಿಸಿದ ಬಗ್ಗೆ ವಿಚಾರಣೆ ಮಾಡಿಲ್ಲ ಎಂದರೆ ಸರಿ. ಪ್ರತ್ಯೇಕ ಅರ್ಜಿ ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ.

8. ನಮ್ಮ ಜಮೀನಿನ ಸುತ್ತಮುತ್ತಲಿನ ಜಮೀನುಗಳ ಮಾರುಕಟ್ಟೆ ಬೆಲೆಯನ್ನು ಪರಿಗಣಿಸಿ ನನ್ನ ಜಮೀನಿಗೆ ಸೂಕ್ತ ಪರಿಹಾರ ನಿಗದಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯವರು ನನ್ನ ಜಮೀನಿಗೆ ಸೂಕ್ತ ಪರಿಹಾರ ನಿಗದಿ ಮಾಡಿದ್ದರೂ, ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಉಳಿದಂತೆ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ ಹೇಳಿರುತ್ತಾರೆ.

**<u>ಮರುವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಕ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)

1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.